# ಇಲ್ಲೇ ಸ್ವರ್ಗ ಇಲ್ಲೇ ನರಕ

ಮಹಾಕವಿ ಕುವೆಂಪು ಅವರು ತಮ್ಮ ಮೇರುಕೃತಿ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದ ಆರಂಭದಲ್ಲಿ – 'ಹೋಮರಗೆ ವರ್ಜಿಲಗೆ ಡಾಂಟೆ ಮೇಣ್ ಮಿಲ್ಟನಗೆ / ನಾರಣಪ್ಪ ಮೇಣ್ ಪಂಪನಿಗೆ...' ಎಂದು ಮಹಾಕಾವ್ಯಗಳನ್ನು ರಚಿಸಿದ ಪಶ್ಚಿಮದ ಕವಿಗಳ ಜೊತೆ ನಮ್ಮ ಕನ್ನಡದ ಮಹಾಕವಿಗಳನ್ನು ಸ್ಮರಿಸಿಕೊಳ್ಳುತ್ತಾರೆ. ಕುವೆಂಪು ಅವರು ತಮ್ಮ ಮಹಾಕಾವ್ಯದ ರಚನೆಯ ಸಂದರ್ಭದಲ್ಲಿ ಈ ಮಹಾಕವಿಗಳ ಕಾವ್ಯ ಸ್ವರೂಪವನ್ನು ಆಳವಾಗಿ ಅಭ್ಯಾಸ ಮಾಡಿದಂತೆ ತೋರುತ್ತದೆ. ಮಹತ್ತಾದ ಕಾವ್ಯರಚನೆಗೆ ಕೈ ಹಾಕಿದವರೆಲ್ಲ ಇಂತಹ ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳುವುದು ಅನಿವಾರ್ಯವಾಗಿರುತ್ತದೆ.

ಡಾಂಟೆಯ 'ಡಿವೈನ್' ಒಂದು ವಿಶೇಷ ಕೃತಿ. ಡಾಂಟೆ ಮತ್ತು ಮೈಕೆಲಾಂಜೆಲೋ ಇಟಲಿಯ ಸಾಹಿತ್ಯ, ಸಂಸ್ಕೃತಿ, ಕಲೆ ರೂಪಿಸುವಲ್ಲಿನ ಮೇರು ಶಿಖರಗಳು ಎಂದು ಪ್ರೊ. ಕೆ.ಎಂ. ಸೀತಾರಾಮಯ್ಯ ಗುರುತಿಸುತ್ತಾರೆ. ಸೀತಾರಾಮಯ್ಯ ಅವರದು ವಿಶೇಷ ಪ್ರತಿಭೆ. ಗ್ರೀಕ್ ಸಾಹಿತ್ಯವನ್ನು ಅಧ್ಯಯನ ಮಾಡಿದ್ದ ಅವರು, ಆ ಕುರಿತಂತೆ ಹಲವು ಪುಸ್ತಕಗಳನ್ನು ರಚಿಸಿದ್ದಾರೆ. ಗ್ರೀಕ್ ಪುರಾಣದಲ್ಲಿ ಬರುವ ಕಥೆಗಳು, ವೀರರು, ದೇವತೆಗಳು, ಅರೆದೇವತೆಗಳು, ಮಹಾಯುದ್ಧಗಳನ್ನು ಕನ್ನಡಿಗರಿಗೆ ಪರಿಚಯಿಸಿದ ವಿಶೇಷ ಕೃತಿಯಾಗಿದೆ.

ಡಾಂಟೆಯ 'ಡಿವೈನ್ ಕಾಮೆಡಿ' ಇಟಲಿಯ ಸಾಹಿತ್ಯದಲ್ಲಿನ ಮೇರುಕೃತಿ. ಡಾಂಟೆ ಸೈನಿಕ, ರಾಜಕಾರಣಿಯಾಗಿದ್ದು ಕಾವ್ಯರಚನೆ ಹಾಗೂ ತತ್ವಶಾಸ್ತ್ರವನ್ನು ಬಲ್ಲವನಾಗಿದ್ದ. ತಾನು ಸೇರಿದ ಟಸ್ಕನಿ ಪ್ರದೇಶದ ಜನಸಾಮಾನ್ಯರ ಆಡುಭಾಷೆಯಲ್ಲಿ ತನ್ನ ಮಹಾಕಾವ್ಯವನ್ನು ರಚಿಸಿದ. ಇದು ಆತ್ಮವೊಂದು ನರಕ, ಪ್ರಾಯಶ್ಚಿತ್ತ ಲೋಕ, ಸ್ವರ್ಗಲೋಕವನ್ನು ಸಂದರ್ಶಿಸುವ ಕೃತಿಯಾಗಿದೆ. ಸ್ವರ್ಗ, ನರಕಗಳೆಂಬ ಲೋಕಗಳಿವೆಯೇ? ಆ ಚರ್ಚೆಯೇ ಬೇರೆ. ಆದರೆ ಅವುಗಳನ್ನು ಆ ಯುಗಗಳಲ್ಲಿ ಜೀವಿಸಿದ ಕವಿಗಳು ಕಟ್ಟಿಕೊಡುವುದರ ಮೂಲಕ ಏನನ್ನು ಹೇಳಹೊರಟಿದ್ದಾರೆ ಎಂಬುದು ಮುಖ್ಯವಾದ ಸಂಗತಿಯಾಗುತ್ತದೆ.

ಡಾಂಟೆ ಜೀವನದಲ್ಲಿ ಬಿಯಾಟ್ರೀಚೆಗೆ ವಿಶೇಷ ಸ್ಥಾನವಿದೆ. ಈ ಹೆಸರನ್ನು ಬಿಯಾಟ್ರಿಸ್ ಎಂದು ಬಳಸುವುದೂ ಉಂಟು. ಇವರಿಬ್ಬರ ಸಂಬಂಧ ವಿಶೇಷವಾದದ್ದು. ದೈನಂದಿನ ಜೀವನದಲ್ಲಿ ಸಂಭವಿಸದ ಇವರ ಸಾಂಗತ್ಯ ಅಲೌಕಿಕವಾದದ್ದು. ಈ ಕೃತಿಯಲ್ಲಿ ಒಂಬತ್ತು ಎನ್ನುವ ಸಂಖ್ಯೆ ವಿಶೇಷವಾದದ್ದು. ಒಂಬತ್ತು ವರ್ಷ ತುಂಬುವ ಹಂತದಲ್ಲಿದ್ದ ಡಾಂಟೆ ಒಂಬತ್ತು ವರ್ಷ ಆರಂಭವಾಗುವ ವಯಸ್ಸಿನಲ್ಲಿದ್ದ ಆಕೆಯನ್ನು ನೋಡಿ ಆಕರ್ಷಿತನಾಗುತ್ತಾನೆ. ಸಂಖ್ಯಾಶಾಸ್ತ್ರದ ಬಗ್ಗೆ ವಿಶೇಷ ನಂಬಿಕೆ ಇಟ್ಟುಕೊಂಡಿದ್ದ ಡಾಂಟೆ ಫ್ಲಾರೆನ್ಸ್ ನಗರದ ಆ ಕಾಲದ ಅರವತ್ತು ಸುಂದರಿಯರ ಪಟ್ಟಿಯೊಂದನ್ನು ತಯಾರಿಸಿದ. ಅದರಲ್ಲಿ ಆಕೆಗೆ ಒಂಬತ್ತನೇ ಸ್ಥಾನ ಕೊಟ್ಟ. ಆ ರಾತ್ರಿ ಒಂಬತ್ತು ಗಂಟೆಗೆ ಅವನಿಗೆ ದಿವ್ಯದೃಷ್ಟಿಯೊಂದು ಲಭಿಸಿ, ತನ್ನ ಗೋಪ್ಯವಾದ ಪ್ರೀತಿಯ ಬಗ್ಗೆ ಪ್ರಾಯಶ್ಚಿತ್ತ ಭಾವನೆಯಿಂದ ಕವಿತೆಯೊಂದನ್ನು ಬರೆದ. ಅವಳ ತಂದೆ ಸತ್ತ ನಂತರದ ಒಂಬತ್ತು ವರ್ಷದಲ್ಲಿ ಅವಳೂ ಸಾಯುತ್ತಾಳೆ ಎಂಬ ಅರಿವು ಅವನಿಗುಂಟಾಯಿತು. ಒಂಬತ್ತು ವರ್ಷಗಳ ನಂತರ ಅವಳ ಸಾವಿನ ಸುದ್ದಿ ತಲುಪುತ್ತದೆ. ಜೂನ್ ತಿಂಗಳ ಒಂಬತ್ತನೇ ದಿನ ಅವಳು ಸಾಯುತ್ತಾಳೆ. 'ದಿ ಡಿವೈನ್ ಕಾಮೆಡಿಯ' ರಚನೆಯಲ್ಲೂ ಒಂಬತ್ತರ ಕಲ್ಪನೆ ಕೆಲಸ ಮಾಡುತ್ತದೆ. ಅವಳನ್ನು ಕುರಿತು ಬರೆದ ಪ್ರೇಮ ಕವಿತೆಗಳು ಮುಂದೆ 'ವಿಟನೋವ' ಎಂಬ ಹೆಸರಿನಿಂದ ಪ್ರಕಟಗೊಂಡವು.

ಆ ಕೃತಿಯ ವೈಶಿಷ್ಟ್ಯವೇನೆಂದರೆ ಅಲ್ಲಿ ಅವನು ಚಿತ್ರಿಸಿದ ಲೋಕಗಳಲ್ಲಿ ಪ್ರಯಾಣಿಸುವವನು ಅವನೇ ಆಗಿದ್ದಾನೆ. ಇದೊಂದು ರೀತಿಯ ಆಧ್ಯಾತ್ಮಿಕ ಪಯಣ. ಮೊದಲ ಭಾಗವಾದ ನರಕದಲ್ಲಿ ಅವನು ದಿಕ್ಕು ತಪ್ಪಿ ಅಲೆದಾಡುವ ಒಂಟಿ ಪಯಣಿಗ. ಎರಡನೆಯ ಭಾಗವಾದ ಪ್ರಾಯಶ್ಚಿತ್ತ ಲೋಕದಲ್ಲಿ ದಿಕ್ಕು ತಪ್ಪಿರುವ ಅವನ ಕೈ ಹಿಡಿದು ನಡೆಸುವವನು ಮಹಾಕವಿ ವರ್ಜಿಲ್. ವರ್ಜಿಲ್ ಸಹ ಪ್ರವೇಶಿಸಲಾರದ ಮೂರನೆಯ ಭಾಗವಾದ ಸ್ವರ್ಗಲೋಕದಲ್ಲಿ ಅವನ ಕೈ ಹಿಡಿದು ನಡೆಸುವವಳು ಬಿಯಾಟ್ರೀಚೆ. ಪ್ರೇಯಸಿಯಾಗಿ, ಆತ್ಮಸಖಿಯಾಗಿ, ಮಾತೃವಾತ್ಸಲ್ಯದವಳಾಗಿ ಉನ್ನತಿಯೆಡೆಗೆ ನಡೆಸುತ್ತಾಳೆ. ಹೀಗೆ ಎಂದೋ ಕಂಡ, ಎಂದೂ ಕೂಡದ ಹೆಣ್ಣನ್ನು ಬದುಕಿನ ಕೊನೆ ತನಕವೂ ತನ್ನಲ್ಲಿ ಜೀವಂತವಾಗಿಟ್ಟುಕೊಂಡ ಮಹಾಕವಿ ಡಾಂಟೆ.

ಕನ್ನಡದ ಸಂದರ್ಭದಲ್ಲಿ ಮಾಹಾಕವಿ ಕುವೆಂಪು ಅವರ ಇಂತಹುದೇ ಕವಿತೆಯೊಂದು ಲಭ್ಯವಾಗುತ್ತದೆ. ಕುವೆಂಪು ಸಾಕಷ್ಟು ಪ್ರೇಮಕವಿತೆಗಳನ್ನು ಬರೆದರೂ ಅವು ಪಾಶ್ಚಾತ್ಯ ಸಾಹಿತ್ಯದಲ್ಲಿರುವಂತೆ ಸಹಜ ಮಾನವ ಭಾವಗಳ ತೀವ್ರ ಅನುರಕ್ತಿ ಎಂಬಂತೆ ಬರುವುದಿಲ್ಲ. ಅವು ದಾಂಪತ್ಯದ ಚೌಕಟ್ಟಿನಲ್ಲಿ ಆಧ್ಯಾತ್ಮಿಕ ಜೀವನದ ಸಹಭಾಗಿ ಎನ್ನುವಂತೆ ಪ್ರಕಟಗೊಳ್ಳುತ್ತದೆ. ಪುರುಷನನ್ನು ಉದ್ಧರಿಸಲೆಂದು ಬಂದ ದಿವ್ಯಚೇತನವಾಗಿಯೇ 'ಹೆಣ್ಣು' ಕುವೆಂಪು ಅವರ ಕವಿತೆಗಳಲ್ಲಿ ಪ್ರಕಟಗೊಳ್ಳುತ್ತಾಳೆ.

'ಸ್ವರ್ಗದ್ವಾರದಿ ಯಕ್ಷಪ್ರಶ್ನೆ' ಎಂಬ ಕವಿತೆ ಈ ಹಿನ್ನೆಲೆಯಲ್ಲಿ ವಿಶೇಷವಾದದ್ದು. ಡಿವೈನ್ ಕಾಮಿಡಿಯ ನಾಯಕನಂತೆ ಇಲ್ಲಿಯ ನಾಯಕನೂ ಸ್ವಪ್ನದಲ್ಲಿ ಸತ್ತಿದ್ದಾನೆ. ಕನಸಿನಲ್ಲಿ ಸತ್ತ ಕವಿ ಸ್ವರ್ಗೋನ್ಮುಖಿಯಾಗಿ ಚಲಿಸುತ್ತಾ ಇದ್ದಕ್ಕಿದ್ದಂತೆ ಕನ್ನಡದಲ್ಲಿ ಬರೆದ 'ನರಕಕ್ಕೆ ದಾರಿ' ಎಂಬ ಬೋರ್ಡ್ ಕಂಡು ಆ ದಾರಿಯೆಡೆಗೆ ನುಗ್ಗುತ್ತಾರೆ. ನರಕದ ಪ್ರವೇಶ ನಿರಾಕರಿಸಲ್ಪಟ್ಟ ಕವಿ ಸ್ವರ್ಗದ ಬಾಗಿಲಿನ ಮುಂದೆ ನಿಂತಾಗ ದ್ವಾರಪಾಲಕ ತಡೆದು 'ಯಾರು' ಎನ್ನುತ್ತಾನೆ. ಕವಿ ಸಹಜವಾಗಿ 'ನಾನು' ಎನ್ನುತ್ತಾರೆ. ದ್ವಾರ ತೆಗೆಯುವುದಿಲ್ಲ. ಮುಂದೆ 'ಪುಟ್ಟಪ್ಪ' ಎನ್ನುತ್ತಾರೆ. ನಂತರ 'ಕೆ.ವಿ. ಪುಟ್ಟಪ್ಪ' ಎನ್ನುತ್ತಾರೆ. ಬಾಗಿಲು ತೆರೆಯುವುದಿಲ್ಲ. ಮುಂದುವರೆದು ನಾನು 'ಕುವೆಂಪು' ಎನ್ನುತ್ತಾರೆ. ಅವನು ಗಹಗಹಿಸಿ ನಗುತ್ತಾನೆ. ಬಾಗಿಲು ತೆರೆಯುವುದಿಲ್ಲ.

ಅವಮಾನಿತರಾದ ಕವಿ ಸೋಲದೆ ತಮ್ಮೆಲ್ಲ ಬಿರುದು ಬಾವಲಿಗಳನ್ನೆಲ್ಲ ಅವನ ಮುಂದೆ ಇಡುತ್ತಾರೆ. ಲೆಕ್ಚರರ್, ಅಸಿಸ್ಟೆಂಟ್ ಪ್ರೊಫೆಸರ್, ಪ್ರಿನ್ಸಿಪಾಲ್, ವೈಸ್ ಚಾನ್ಸಲರ್, ಪದ್ಮಭೂಷಣ ಕವಿ, ರಾಷ್ಟ್ರಕವಿ ಹೀಗೆ ತಮ್ಮ ಸಾಧನೆಗಳನ್ನೆಲ್ಲಾ ಮುಂದಿಡುತ್ತಾರೆ. ಏನು ಮಾಡಿದರೂ ಬಾಗಿಲು ತೆರೆಯುವುದಿಲ್ಲ. ನರಲೋಕದ ಮನ್ನಣೆಗಳಿಗೆ ಇಲ್ಲಿ ಬೆಲೆಯಿಲ್ಲ. 'ಆವುದಿದೆ ನಿನ್ನೊಳಗಿನ ಬೆಳಗು, ಅದನು ಹೇಳುವಂತವನಾಗು' ಎಂದು ಆ ದ್ವಾರಪಾಲಕ ಹೇಳಿದಾಗ ಕವಿಯ ಒಳಗೆ ಒಂದು ತಿಳಿವಿನ ಬೆಳಕು ಮಿಂಚುತ್ತದೆ. ಕೇವಲ ತನ್ನ ಸಾಧನೆಗಳ, ಬಿರುದು ಪ್ರಶಸ್ತಿಗಳನ್ನು ಹೆಮ್ಮೆಯಿಂದ ಹೇಳಿಕೊಂಡೆನೇ ವಿನಃ ತನ್ನ ಬೆನ್ನ ಹಿಂದೆ ಬೆಳಗುವ, ಪೊರೆಯುವ ಮೌನ ತಪಸ್ವಿನಿಯನ್ನು ಮರೆತೆನಲ್ಲಾ ಎಂಬ ಅಪರಾಧಿ ಭಾವ ಕಾಡಲು ಶುರುವಾಗುತ್ತದೆ. ತಮ್ಮೆಲ್ಲಾ ನಾಚಿಕೆ ಹಮ್ಮುಬಿಮ್ಮುಗಳನ್ನು ತೊರೆದು ತನ್ನನ್ನು ಕಾಪಿಡುವ ಸಂಗಾತಿ ಸಹಧರ್ಮಿಣಿಯನ್ನು ಹೆಸರಿಸುತ್ತಾರೆ. 'ಸತಿಯ ಒಲವಿನ ಸೆರೆಯ ನಾನು ನಾ..ನು, ನಾ..ನು, ನಾನು ಹೇ..ಮಿ.. ಗಂಡ' ಎಂಬ ಕವಿಯ ಶರಣಾಗತಿಯ ಮಾತಿಗೆ ಸ್ವರ್ಗದ ಕದ ತೆರೆದುಕೊಳ್ಳುತ್ತದೆ. ಒಳಗಡೆ ನೆಮ್ಮದಿಯ ಆಶ್ರಯ ನೀಡಬಲ್ಲ ಹೆಂಡತಿ ಬೆಳಗುತ್ತಿದ್ದಾಳೆ. ಹೀಗೆ ಗಂಡಿನ ಜೀವಕ್ಕೆ ತಣ್ಣನೆಯ ನೀರು, ನೆಳಲು, ಭದ್ರತೆ ಕೊಡುವ ಶಕ್ತಿ ಪಾಶ್ಚಾತ್ಯವಾಗಲೀ, ಪೌರ್ವಾತ್ಯವಾಗಲೀ ಅದು ಹೆಣ್ಣೇ ಆಗಿರುತ್ತದೆ. ಹೆಣ್ಣನ್ನು ಗೌರವಿಸದ, ಬಾಳಸಂಗಾತಿ ಎಂದು ಅಭಿಮಾನದಿಂದ ಕಾಣದ ಗಂಡಿಗೆ ಸ್ವರ್ಗದ ಮಾತಿರಲಿ, ನರಕದಲ್ಲೂ ನೆರಳು ಸಿಕ್ಕುವುದಿಲ್ಲ.

■ **ಅಮೃತಮತಿ**

## ಮಾತೇ ಮುತ್ತು

- ಸತ್ಯವನ್ನು ಹೇಳುವಾಗ ಆದಷ್ಟೂ ಪ್ರೀತಿಯಿಂದ, ಒಳ್ಳೆಯ ರೀತಿಯಿಂದ ಹೇಳಬೇಕು. ಇಲ್ಲವಾದಲ್ಲಿ ಸತ್ಯದ ಆ ಸಂದೇಶ ಮತ್ತು ಸಂದೇಶ ನೀಡುವ ವ್ಯಕ್ತಿ ತಿರಸ್ಕಾರಕ್ಕೆ ತುತ್ತಾಗುವ ಸಾಧ್ಯತೆ ಹೆಚ್ಚು.

  —ಮಹಾತ್ಮ ಗಾಂಧಿ

- ಬಾಳ್ವೆ ಇರುವುದು ಕಲಿಯುವುದಕ್ಕೆ/ ಕಲಿತು ತಿದ್ದಿಕೊಳ್ಳುವುದಕ್ಕೆ/ ತಿದ್ದಿ ತೃಪ್ತಿಪಡಿಯುವುದಕ್ಕೆ/ ಬಾಳು ಬೆದರುವುದಕ್ಕಾಗಿಯಲ್ಲ, ಬದುಕುವುದಕ್ಕಾಗಿ.

  —ಶಿವರಾಮ ಕಾರಂತ

- ನೊಣಗಳು ನಮ್ಮ ಸುಂದರವಾದ ಇಡೀ ದೇಹವನ್ನು ಬಿಟ್ಟು ಗಾಯದ ಮೇಲೆಯೇ ಕುಳಿತುಕೊಳ್ಳುವ ಹಾಗೆಯೇ ಕೆಲವರು ನಮ್ಮಲ್ಲಿರುವ ಸದ್ಗುಣಗಳನ್ನು ತಳ್ಳಿಹಾಕಿ ಲೋಪದೋಷಗಳನ್ನು ಮಾತ್ರ ಹುಡುಕುತ್ತಾರೆ.

  —ಅಬ್ದುಲ್ ಕಲಾಂ